ಸಭೆಯ ಕಲಾಪವು 11 ಗಂಟೆ 13 ನಿಮಿಷಕ್ಕೆ ಪ್ರಾರಂಭವಾಯಿತು

ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು

ಅಧ್ಯಕ್ಷರು:– ಈಗ ಒಂದು ಪ್ರಕಟಣೆ ಇದೆ.

1. ಪ್ರಕಟಣೆ

ದಿನಾಂಕ: 03.02.2015ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ಈ ಕೆಳಕಂಡಂತೆ ತೀರ್ಮಾನಿಸಲಾಗಿದೆ ಎಂದು ಈ ಮೂಲಕ ಸದನದ ಗಮನಕ್ಕೆ ತರಲಾಗಿದೆ.

1. ವಿಧಾನಸಭೆಯಲ್ಲಿ ಬಾಕಿಯಿರುವ ಹಾಗೂ ಸ್ವೀಕೃತವಾಗಿರುವ ವಿಧೇಯಕಗಳನ್ನು ಸದನದ ಅಂಗೀಕಾರಕ್ಕಾಗಿ ಮಂಡಿಸಲಾಗುವುದು.
2. ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಮೇಲಿನ ವಂದನಾ ನಿರ್ಣಯದ ಪ್ರಸ್ತಾವದ ಮೇಲೆ ದಿನಾಂಕ 11.02.2015ರವರೆಗೆ ಚರ್ಚೆ ನಡೆಸಲಾಗುವುದು ಹಾಗೂ ದಿನಾಂಕ: 12.02.2015 ರಂದು ಸದರಿ ಚರ್ಚೆಗೆ ಉತ್ತರವನ್ನು ಸರ್ಕಾರದಿಂದ ನೀಡಲಾಗುವುದು.

ಈಗ ಪ್ರಶ್ನೋತ್ತರ ಪ್ರಾರಂಭ ಮಾಡೋಣ.

ಶ್ರೀ ಆರ್. ಅಶೋಕ್:– ಮಾನ್ಯ ಅಧ್ಯಕ್ಷರೆ, ನಮ್ಮ ವಿಶ್ವ ಹಿಂದು ಪರಿಷತ್‌ನ 50 ವರ್ಷದ ಸುವರ್ಣ ಜಯಂತಿ ಉತ್ಸವದ ಅಂಗವಾಗಿ ಒಂದು ಕಾರ್ಯಕ್ರಮವನ್ನು ಮಾಡುತ್ತಿದ್ದಾರೆ. ಆ ಕಾರ್ಯಕ್ರಮಕ್ಕೆ ಸರ್ಕಾರ ಏಕೋ, ದಿನ ನಿತ್ಯ ಪ್ರತಿಭಟನೆಗಳು ಸರ್ಕಾರದ ವಿರುದ್ಧ ನಡೆಯುತ್ತಿರುವುದನ್ನು ನೋಡಿದರೆ. . .

ಅಧ್ಯಕ್ಷರು:– ಈಗ ಶೂನ್ಯವೇಳೆಯಲ್ಲಿ ತಾವು ಕೊಟ್ಟಿರುವ ವಿಷಯವನ್ನು . . . .

ಶ್ರೀ ಆರ್. ಅಶೋಕ್:– ತೊಗಾಡಿಯಾರವರು ಬೆಂಗಳೂರಿಗೆ ಬರುವುದನ್ನು ತಡೆ ಮಾಡುತ್ತಿದ್ದಾರೆ, ಇದೊಂದು democracy country.

ಅಧ್ಯಕ್ಷರು:– ನೀವೇ ಕೊಟ್ಟಿರುವ ಪತ್ರವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಡುವುದಕ್ಕೆ ನಮ್ಮ ಅಜೆಂಡಾದಲ್ಲಿ ಸೇರಿಸಿಕೊಂಡಿದ್ದೇನೆ.

ಶ್ರೀ ಆರ್. ಅಶೋಕ್:– ಮಾನ್ಯ ಅಧ್ಯಕ್ಷರೆ, ಈಗಾಗಲೇ ಕರ್ನಾಟಕದಲ್ಲಿ ಬಹಳ ಕಡೆ ಎಂದರೆ ಆರು ಕಡೆ ನಡೆದಿದೆ. ಬಿಜಾಪುರ, ಬಾಗಲಕೋಟೆ, ಗೋಕಾಕ್, ಗೋಣಿಕೊಪ್ಪದಲ್ಲಿ, ಪುತ್ತೂರು ಮತ್ತು ಚಿತ್ರದುರ್ಗದಲ್ಲಿ ಸಮಾವೇಶ ನಡೆದಿದೆ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಈಗ ಇದನ್ನು ಪ್ರಸ್ತಾಪ ಮಾಡಬೇಕೇ, ಅದಕ್ಕೆ ನೀತಿ ಇಲ್ಲವೇ? ಅಜೆಂಡಾ ಪ್ರಕಾರ ಹೋಗೋಣ.

(ಗೊಂದಲ)

ಅಧ್ಯಕ್ಷರು:– ಆಯಿತು, ಅವರಿಗೆ ಶೂನ್ಯವೇಳೆಯಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ಸಮಯವನ್ನು ವ್ಯರ್ಥ ಮಾಡಬೇಡಿ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು:– ಬೆಂಗಳೂರು ಶಾಂತವಾಗಿದೆ, ಶಾಂತವಾಗಿರುವುದಕ್ಕೆ ಅವಕಾಶ ಮಾಡಿಕೊಡಿ. ಬೆಂಗಳೂರಿನಲ್ಲಿ ಅಶಾಂತಿ ನಿರ್ಮಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:– ಈಗ ಅಜೆಂಡಾ ಪ್ರಕಾರ ಹೋಗೋಣ.

ಶ್ರೀ ಆರ್. ಅಶೋಕ್:– ಒಂದು ರೀತಿಯಲ್ಲಿ ಹಿಟ್ಲರ್ ಪ್ರವೃತ್ತಿಯನ್ನು ಸರ್ಕಾರ ಮಾಡುತ್ತಿದೆ.

ಅಧ್ಯಕ್ಷರು:– ಮಾನ್ಯ ಸದಸ್ಯರಲ್ಲಿ ನನ್ನ ವಿನಂತಿ. ಅಶೋಕ್‌ರವರೆ, ನಿಮಗೆ ಖಂಡಿತ ಅವಕಾಶ ಕೊಡುತ್ತೇನೆ. ನಾನು ಕಾರ್ಯಕ್ರಮದ ಪಟ್ಟಿಯಲ್ಲಿ ಅದನ್ನು ಇಟ್ಟುಕೊಂಡಿದ್ದೇನೆ. ದಯವಿಟ್ಟು ಸಹಕಾರ ಮಾಡಿ.

ಶ್ರೀ ಕೆ.ಎನ್. ರಾಜಣ್ಣ:– Zero Hourನಲ್ಲಿ ಅದನ್ನು ಪ್ರಸ್ತಾಪ ಮಾಡಿ ಈಗ Question Hour.

ಶ್ರೀ ಸಿದ್ದರಾಮಯ್ಯ:– ಬರಬೇಡ ಎನ್ನುವುದೇ ಕಾಯಿದೆ, ಸಮಾಜದಲ್ಲಿ ಅಶಾಂತಿ ಉಂಟು ಮಾಡುವುದನ್ನು ತಡೆಗಟ್ಟುವುದೇ ಕಾಯಿದೆ, ಅಶಾಂತಿಯನ್ನು ನಿಲ್ಲಿಸುವುದೇ ಕಾಯಿದೆ, ದ್ವೇಷ ಉಂಟು ಮಾಡತಕ್ಕಂಥವರು

ಒಬ್ಬ ಮಾನ್ಯ ಸದಸ್ಯರು:– ಕೋಮು ಗಲಭೆಯ ಫ್ಯಾಕ್ಟರಿ ನಡೆಯುತ್ತಿರುವುದು

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಸಮಾಜದಲ್ಲಿ ಸಾಮರಸ್ಯ ಹಾಳು ಮಾಡತಕ್ಕಂಥ, ದ್ವೇಷ ಬಿತ್ತತಕ್ಕಂಥಾದ್ದಕ್ಕೆ ಅವಕಾಶ ಕೊಡುವುದಿಲ್ಲ.

(ಗೊಂದಲ)

ಅಧ್ಯಕ್ಷರು:– ಜಗದೀಶ್ ಶೆಟ್ಟರ್, ನಾಯಕರೇ, ಇದೇನು ಚರ್ಚೆ ಪ್ರಾರಂಭವೋ? ಇದು ಚರ್ಚೆಯೇ, ಉತ್ತರವೇ, ಏನಿದು? ಅಶೋಕ್, ನಿಮಗೆ ದಯವಿಟ್ಟು ಅವಕಾಶ ಕೊಡುತ್ತೇನೆ, ನೀವು ಪ್ರಸ್ತಾಪ ಮಾಡಿ, ಉತ್ತರ ಹೇಳಲಿ. ದಯವಿಟ್ಟು ಈ ರೀತಿಯಾದರೆ ಆಗುವುದಿಲ್ಲ.

ಶ್ರೀ ಆರ್. ಅಶೋಕ್:– ಅಲ್ಲ, ಒಬ್ಬೊಬ್ಬರಿಗೆ ಒಂದೊಂದು ನ್ಯಾಯ ಮಾಡಿದರೆ ಹೇಗೆ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ ಆಮೇಲೆ ಪ್ರಶ್ನೋತ್ತರ ಆದ ಮೇಲೆ ಅವಕಾಶ ಕೊಡಬೇಕು.

ಅಧ್ಯಕ್ಷರು:– ಆಯಿತು, ನಾನು ಅಜೆಂಡಾದಲ್ಲಿ ಇಟ್ಟುಕೊಂಡಿದ್ದೇನೆ, ಅವಕಾಶ ಕೊಡುತ್ತೇನೆ. ಈಗ ಪ್ರಶ್ನೋತ್ತರ. ಈಗ ಗುರುಪಾದಪ್ಪ ನಾಗಮಾರಪಳ್ಳಿಯವರು ಪ್ರಶ್ನೆ ಕೇಳಿ.

ಒಬ್ಬ ಮಾನ್ಯ ಸದಸ್ಯರು:– ಮುತಾಲಿಕ್‌ಗೆ ಗೋವಾದಲ್ಲಿ. . .

(ಗೊಂದಲ)

ಒಬ್ಬ ಮಾನ್ಯ ಸದಸ್ಯರು:– ಮುತಾಲಿಕ್ ಬಿಡಿ, ನಮಗೆ ಗೊತ್ತಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ನೋಡಿ, ಯಾರೇ ಸಮಾಜದ ಸಾಮರಸ್ಯವನ್ನು ಹಾಳು ಮಾಡತಕ್ಕಂಥ, ದ್ವೇಷ ಬಿತ್ತತಕ್ಕಂಥ, ದ್ವೇಷದ ರಾಜಕಾರಣ ಮಾಡತಕ್ಕಂಥ, ಭಾಷಣ ಮಾಡತಕ್ಕಂಥವರಿಗೆ ಅವಕಾಶ ಕೊಡುವುದಿಲ್ಲ.

ಅಧ್ಯಕ್ಷರು:– ಅವರು ಈ ವಿಷಯವನ್ನು ಎತ್ತಿದಾಗ ಉತ್ತರ ಕೊಡಿ, ಈಗ ಏಕೆ ಕೊಡುವುದಕ್ಕೆ ಹೋಗುತ್ತೀರಿ? ಆಯಿತು ಆಮೇಲೆ ಅವಕಾಶ ಕೊಡುತ್ತೇನೆ.

ಶ್ರೀ ಎಂ. ಸತೀಶ್ ರೆಡ್ಡಿ:– ಹಿಂದುಗಳ ವಿರೋಧ ಮಾಡಿದರೆ ನಿಮಗ್ ಹಿಂದುಗಳು ಓಟು ಹಾಕುವುದಿಲ್ಲ.

(ಗೊಂದಲ)

ಅಧ್ಯಕ್ಷರು:– ಆಯಿತು, ಖಂಡಿತ ನಿಮಗೆ ಅವಕಾಶ ಕೊಡುತ್ತೇ ಸುಮ್ಮನಿರಿ. ಈಗ ಗುರುಪಾದಪ್ಪ ನಾಗಮಾರಪಳ್ಳಿಯವರು ಇಲ್ಲ. ಅಪ್ಪ ರಂಜನ್ ಪ್ರಶ್ನೆ ಕೇಳಿ.